'ಸರ್ ನಮಸ್ಕಾರ, ನನ್ನ ಹೆಸರು ಅಣ್ಣಯ್ಯ. ನೀವೂ... ನೀವು ಕತೆಗಾರ ಸುಭಾಷ್ಚಂದ್ರ ತಾನೇ?' ಬೆಳಗಿನಿಂದ ಅನ್ಯಮನಸ್ಕನಾಗಿ ಕುಳಿತಿದ್ದ ನಾನು ಬೆಚ್ಚಿದೆ. ಸಂಪೂರ್ಣ ಅಪರಿಚಿತ ಮುಖ. ನಸು ಬೆಳ್ಳಗೆ, ಆರೋಗ್ಯದಿಂದ ಹೊಳೆವ ಚರ್ಮ, ಒತ್ತಾಗಿ ಬಾಚಿ ಶಿಸ್ತಿನಿಂದ ರೂಪಿಸಿರುವ ಪೊದೆಮೀಸೆ, ಬಹುಪಾಲು ಬಿಳಿಯಾಗಿದ್ದರೂ ಕಳೆಕಳೆಯಾಗಿದ್ದ ತಲೆಗೂದಲು. ಒಳ್ಳೆ ಆಜಾನುಬಾಹು ದೇಹದ, ಸ್ನೇಹಮಯಿ ಕಂಗಳ ನೋಡಿದೊಡನೆ ಇಷ್ಟವಾಗಬಲ್ಲ ನಿಲುವುಳ್ಳ ವ್ಯಕ್ತಿಯೊಬ್ಬ ಹೀಗೆ ದೇಹವನ್ನು ಕುಗ್ಗಿಸಿಕೊಂಡು, ದನಿ ತಗ್ಗಿಸಿಕೊಂಡು ನನ್ನೆದುರು ಸ್ನೇಹದಿಂದ ಕೈಕುಲುಕಲೆಂಬಂತೆ ನಿಂತಿರುವಾಗ ನಾನು ಅಯಾಚಿತವಾಗಿ ಕೈಚಾಚಿ ಕುಲುಕಿ 'ಮ್ ಹೌದು ನಾನೇ' ಎಂದು ತೊದಲಿದ್ದೆ. 'ನಾನು ನಿಮ್ಮ ಆಲ್ಮೋಸ್ಟ್ ಎಲ್ಲ ಪುಸ್ತಕಗಳನ್ನ ಓದಿದ್ದೀನಿ ಸರ್. ನಂಗೆ ಬಹಳ ಇಷ್ಟವಾದ ರೈಟರ್ ನೀವು. ನಿಮ್ಮನ್ನ ನೋಡಬೇಕು ಮಾತಾಡಬೇಕು ಅಂತ ಬಹಳ ಸಲ ಅನಿಸ್ತಿತ್ತು ಸರ್. ನಿಜವಾಗ್ಲೂ ಅದು ಸಾಧ್ಯವಾಗುತ್ತೆ ಅಂತ ಖಂಡಿತ ಅಂದುಕೊಂಡಿರಲಿಲ್ಲ ಸರ್' ಅವನು ಉದ್ವೇಗದಿಂದ ಮಾತಾಡಿದ. ನಿಜ ಹೇಳಬೇಕೆಂದರೆ ಅವೊತ್ತು ನಾನು ತುಂಬ ಬೇಸರದಲ್ಲಿದ್ದೆ. ಬೆಳಗ್ಗೆ ನೀಲಿ ನನ್ನೊಂದಿಗೆ ಜಗಳವಾಡಿದ್ದಳು. ಬೆಳಗ್ಗೆ ಅವಳು ಅಚಾನಕ್ಕಾಗಿ ನನ್ನ ಫೋನೆತ್ತಿಕೊಂಡು ಸೀದಾ ಗ್ಯಾಲರಿಗೆ ಹೋಗಿ ಅಲ್ಲಿದ್ದ ನ್ಯೂಡ್ ಫೋಟೊಗಳನ್ನ ನೋಡಿ ಸಿಕ್ಕಾಪಟ್ಟೆ ಸಿಟ್ಟಾಗಿ, 'ಇದೆಲ್ಲ ಯಾವಾಗಿನಿಂದ ನಡೀತಿದೆ?' ಎಂದು ಅಬ್ಬರಿಸಿದ್ದಳು. 'ಅಯ್ಯೋ ಮಾರಾಯ್ತಿ, ಅವೆಲ್ಲ ನಮ್ಮ ಫ್ರೆಂಡ್ಸ್ ಗ್ರೂಪ್‌ನಲ್ಲಿ ಬಂದವು ಕಣೇ. ಅದರಲ್ಲಿ ಅಂಥದ್ದೇನಿದೆ? ಅದರಲ್ಲಿ ಎಷ್ಟೋ ಫೋಟೊ, ವಿಡಿಯೊಗಳನ್ನ ನಾ ನೋಡಿ ಕೂಡ ಇಲ್ಲ' ಅಂದಿದ್ದೆ. ಅದು ನಿಜವಾಗಿತ್ತು ಕೂಡ. 'ಹಾಗಿದ್ದರೆ ಆ ಗ್ರೂಪಿಂದ ಹೊರಗೆ ಬರೋಕೇನು ಕಷ್ಟ?' ಅವಳು ಮುಂದಿನ ಪಾಯಿಂಟ್ ರೆಡಿ ಇಟ್ಟಿದ್ದಳು. 'ಹಾಗಲ್ಲವೇ, ಅದರಲ್ಲಿ ಇದಷ್ಟೇ ಅಲ್ಲವೇ, ಒಳ್ಳೊಳೆ ಇನ್‌ಫಾರ್ಮೇಟಿವ್ ಮೆಸೇಜಸ್ ಕೂಡ ಬರ್ತವೆ, ಇನ್‌ಫ್ಯಾಕ್ಟ್ ಬಹಳಷ್ಟು ವಿಷಯಗಳು ತೀರ ನ್ಯೂಸ್‌ನಲ್ಲಿ ಬರೋಕೂ ಮುಂಚೆ ಗ್ರೂಪ್‌ನಲ್ಲಿ ಡಿಸ್ಕಸ್ ಆಗಿರ್ತವೆ. ಬಹಳ ಒಳ್ಳೆ ಗ್ರೂಪಿದು ಮಾರಾಯ್ತಿ, ಆಗೀಗ ಯಾರಾದ್ರೂ ಹೀಗೇನಾದ್ರೂ ಕಳಿಸ್ತಿರ್ತಾರೆ ಅಷ್ಟೇ. ಬೇಕೂಂದ್ರೆ ನೋಡು, ಇಲ್ಲಾಂದ್ರೆ ಡಿಲೀಟ್ ಮಾಡು ಅಷ್ಟೇಪ್ಪ' ಅಂದು ತೇಲಿಸಲು ನೋಡಿದೆ. ಆದರೆ ಅವಳು ಅದಕ್ಕೂ ಪಾಯಿಂಟ್ ಇಟ್ಟಿದ್ದಳು. 'ಆದ್ರೆ ನೀನು ಎಲ್ಲಾನೂ ಸೇವ್ ಮಾಡಿಟ್ಟಿದ್ದೀಯಲ್ಲ? ಎಲ್ಲಿ ಡಿಲೀಟ್ ಮಾಡಿದ್ದಿ? ಓ ರಾಯರಿನ್ನೂ ನೋಡಿಲ್ಲವೋ?' 'ಏಯ್ ಬೊಂಬೆಮರಿ, ಅದೆಲ್ಲ ಯಾವಾಗ್ಲಾದ್ರೊಮ್ಮೆ ಏನಾದ್ರೂ ಒಂಚೂರು ವೆರೈಟಿ ಸಿಗುತ್ತಾಂತ ನೋಡೂದಪ್ಪ, ಆಮೇಲೆ ನಮ್ಮ ಹುಡುಗಿನ ರೊಮ್ಯಾನ್ಸ್ ಮಾಡ್ಲಿಕ್ಕೆ ಯೂಸ್ ಮಾಡೂದಪ್ಪ' ಎಂದೆ. ನಾನೀಗ ಸಿಟ್ಟಾಗುವುದರ ಬದಲು ಆದಷ್ಟೂ ನಯವಾಗಿ ಅವಳನ್ನ ರಮಿಸಿ ಇದರಿಂದ ಹೊರಬರುವ ಪ್ರಾಮಾಣಿಕ ಪ್ರಯತ್ನ ಮಾಡತೊಡಗಿದ್ದೆ. ಅವಳ ಕೈಲಿ ನನ್ನ ಫೋನ್ ಇದ್ದಷ್ಟೂ ನನಗೆ ಒದಗಬಹುದಾದ ಸಮಸ್ಯೆಗಳು ಖಂಡಿತಾ ದೊಡ್ಡದೆಂದು ನನಗೆ ಗೊತ್ತಿತ್ತು. ಅವಳು ಬಡಪೆಟ್ಟಿಗೆ ನನ್ನನ್ನು ಬಿಡುವ ಅಂದಾಜಿನಲ್ಲಿರಲಿಲ್ಲ. ಅಲ್ಲಿಂದ ಅವಳು ಸೀದ ವಾಟ್ಸ್‌ಆ್ಯಪ್‌ಗೆ ಹೋಗಿ ಅದರ ಕಿಟಕಿ ತೆರೆದಳು. ಬಹುಶಃ ಮೊದಲ ಸಾಲಿನಲ್ಲೇ ಇದ್ದಿರಬೇಕು... 'ಯಾರಿದು ಈಶಾನ್ಯೆ?' ಅವಳ ದನಿ ಕಟ್ಟಿತ್ತು. ಅವಳ ಕೆನ್ನೆಗಳು ಕೆಂಪಾಗಿ ಕೋಪ ಮೂಗಿನ ತುದಿವರೆಗೂ ವ್ಯಾಪಿಸಿತ್ತು. ಬೆಳಗಿನ ಸೂರ್ಯ ಕಿಟಕಿಯಿಂದ ಕಿರಣಗಳನ್ನು ತೂರುತ್ತಿರುವ ಸಮಯದಲ್ಲಿ ಅವಳ ಕೋಪ ಫಳಫಳಿಸಿ ಹೊಳೆಯುತ್ತಿತ್ತು. ನನಗೆ ನಿಜಕ್ಕೂ ಬಾಯಿಕಟ್ಟಿತು. ಫೋನಿಗೆ ನಂ ಲಾಕ್ ಇಟ್ಟು ಪ್ರೊಟೆಕ್ಟ್ ಮಾಡಿದ್ದೆ. ಯಾವ ಕಾರಣಕ್ಕೂ ಅದವಳಿಗೆ ತಿಳಿಯುವಂಥದ್ದಾಗಿರಲಿಲ್ಲ. ಇದನ್ನ ಕಂಡು ಹಿಡಿದು ಅವಳವರೆಗೆ ತಲುಪಿಸಿದವರ್ಯಾರು? ನಿನ್ನೆ